
ಕುತ್ತಿಗೆ ನೋವು ಅಂತ ಒಬ್ರು ಬಂದಿದ್ರು, ಟೆನ್ನಿಸ್ ಮ್ಯಾಚ್ ನೋಡಲು ಕೊಟ್ಟ ಸಲಹೆ ವರ್ಕ್ ಔಟ್ ಆಯ್ತು!

**ಅಪ್ಪ:** ಯಾಕೋ ಶಾಲೆಗೆ ಹೋಗಿಲ್ಲ?
**ಚಿಂಟು:** ನಿನ್ನೆ ನಮ್ಮನ್ನೆಲ್ಲಾ ತೂಕ ಮಾಡಿದ್ದಾರೆ ಇವತ್ತು ಮಾರಿ ಬಿಡ್ತಾರೇನೋ ಅಂತ ಹೋಗಿಲ್ಲ.

**ಗುಂಡ:** ಯಾಕೋ ನನ್ನ ಮೇಲೆ ಕೋಪ ಮಾಡ್ಕೊಂಡಿದ್ದೀಯಾ? ನಿನಗೆ ತುಂಬಾ ಕೋಪ ಬರುತ್ತೆ ಅಲ್ವಾ?
**ತಿಮ್ಮ:** ಹೌದು. ನಾನು ಎಷ್ಟು ಕೋಪಿಷ್ಟ ಎಂದರೆ ಹುಟ್ಟಿದಾಗಿನಿಂದ ಎರಡು ವರ್ಷ ಯಾರ ಜೊತೆನೂ ಮಾತನಾಡಿರಲಿಲ್ಲ ಗೊತ್ತಾ?

**ಹೆಂಡತಿ:** ರೀ... ಯಾಕೋ ಅರ್ಧ ತಲೆ ನೊಯ್ತಾ ಇದೆ.
**ಗಂಡ:** ಎಷ್ಟಿದೆಯೊ ಅಷ್ಟೇ ಕಣೇ ನೋಯುವುದು.

**ಮಹಿಳೆ:** ಡಾಕ್ಟ್ರೇ ನಮ್ಮೆಜಮಾನ್ರನ್ನ ಒಳಗೆ ಕರೀರಿ.
**ಡಾಕ್ಟರ್:** ಯಾಕಮ್ಮಾ ನನ್ನ ಮೇಲೆ ಅನುಮಾನನಾ?
**ಮಹಿಳೆ:** ಛೇ ಛೇ ಹಾಗಲ್ಲ. ನಿಮ್ಮ ನರ್ಸು ಹೊರಗಡೆ ನಿಂತಿದಾಳೆ. ನನಗೆ ನನ್ನ ಗಂಡನ ಮೇಲೆ ಅನುಮಾನ.

**ಟೀಚರ್:** ವಿಧಾನ ಸಭೆ ಎಂದರೇನು?
**ಚಿಂಟು:** ಆಯ್ಕೆಯಾಗಿ ಬಂದ ಆಗರ್ಭ ಶ್ರೀಮಂತರು ಬಡತನದ ಬಗ್ಗೆ ಚರ್ಚೆ ಮಾಡುವ ಸ್ಥಳ ಸರ್!

**ಟೀಚರ್:** ಗುಂಡ ಸೀನಿಯರ್‌ಗೂ, ಜೂನಿಯರ್‌ಗೂ ಇರುವ ವ್ಯತ್ಯಾಸವಾದರೂ ಏನೋ?
**ಗುಂಡ:** ಟೀಚರ್, ಸಮುದ್ರದ ಹತ್ತಿರ ವಾಸ ಮಾಡುವವರನ್ನು ಸೀನಿಯರ್ ಎಂದೂ, ಮೃಗಾಲಯದ ಹತ್ತಿರ ವಾಸಿಸುವವರನ್ನು ಜೂನಿಯರ್ ಎಂದೂ ಕರೆಯುತ್ತಾರೆ.

ಅತಿಥಿಯಾಗಲು ಚಾಯ್‌ವಾಲ 5ಲಕ್ಷ ಡಿಮ್ಯಾಂಡ್

ಆ ಲೆಕ್ಕದಲ್ಲಿ ನಮ್ಮದೇನಿಲ್ಲ! ಹಬ್ಬಕ್ಕೆ ಜುಜುಬಿ ಸೀರೆ!

ಪ್ಯಾಕೇಜ್ ಟೂರ್‌ನಲ್ಲಿ ಸೀನಿಯರ್ ಸಿಟಿಜನ್ ಹಾಗೂ ಹನಿಮೂನ್ ಕಪಲ್ಸ್ ಒಟ್ಟಿಗೆ ಬಸ್ ಏರಿದರು.
ತಕ್ಷಣವೇ ಗೈಡ್ ಬಂದು, 'ಕೈಗೆ ಮೆಹಂದಿ ಹಾಕಿದವರು ಬಸ್ಸಲ್ಲಿ ಹಿಂದೆ ಕೂತ್ಕೊಳ್ಳಿ ಮತ್ತು ತಲೆಗೆ ಮೆಹಂದಿ ಹಾಕಿದವರು ಮುಂದಿನ ಸೀಟ್‌ಗಳಲ್ಲಿ ಕೂತ್ಕೊಳ್ಳಿ' ಎಂದ.

ಸಿ ಎಂ ರೇಸ್‌ನಲ್ಲಿ ನಾನಿಲ್ಲ !

ಸಾಂಕೇತಿಕವಾಗಿ ನನ್ನ ಆಸೆಯನ್ನು ಹೇಳಿದ್ದೇನೆ!


ಪಾದಯಾತ್ರೆ ಯಶಸ್ವಿಯಾಯಿತು! ಇನ್ನು ಅಭಿವೃದ್ಧಿ ಕಾರ್ಯಕ್ರಮಗಳತ್ತ ಗಮನ ಕೊಡೋಣ!

ಮಿಕ್ಸಿ ಕೊಳ್ಳಲೆಂದು ದಂಪತಿ ಅಂಗಡಿಗೆ ಹೋಗಿದ್ದಾಗ, ಬಹಳ ಸಮಯದಿಂದ ಗಂಡ ಸೇಲ್ಸ್ ಗರ್ಲನ್ನೇ ನೋಡುತ್ತಿದ್ದ. ಇದರಿಂದ ಕುಪಿತಗೊಂಡ ಹೆಂಡತಿ ಗಂಡನ ಭುಜ ತಟ್ಟಿ ಹೇಳಿದಳು
'ಎಕ್ಸ್‌ಚೇಂಜ್' ಆಫರ್ ಇರುವುದು ಮಿಕ್ಸಿ ಮೇಲೆ ಮಾತ್ರ!

**ಹೆಂಡ್ತಿ:** ಡಾಕ್ಟ್ರೇ ನಮ್ಮೆಜಮಾನ್ರು ನಿದ್ದೇಲಿ ಕನವರಿಸ್ತಾರೆ. ಭಯ ಆಗ್ತಿದೆ ನಂಗೆ.
**ಡಾಕ್ಟ್ರು:** ಅವರಿಗೆ ಏನೂ ಆಗಿಲ್ಲಮ್ಮಾ ಬೆಳಿಗ್ಗೆ ಹೊತ್ನಲ್ಲಿ ಅವರಿಗೂ ಸ್ವಲ್ಪನಾದ್ರೂ ಮಾತಾಡಕ್ಕೆ ಬಿಡಿ.

**ಮದುಮಗ:** ಶಾಸ್ತ್ರಿಗಳೇ, ವಧುವನ್ನು ಎಡಕ್ಕೆ ಕೂರಿಸಿಕೊಳ್ಳಬೇಕಾ ಅಥವಾ ಬಲಕ್ಕೆ ಕೂರಿಸಿಕೊಳ್ಳಬೇಕಾ?
**ಶಾಸ್ತ್ರಿಗಳು:** ಅಯ್ಯೋ... ಎಲ್ಲೋ ಒಂದ್ಕಡೆ ಕೂಡಿಸ್ಕೊಳಯ್ಯಾ ಹೇಗಿದ್ರೂ ಮದುವೆ ಆದ್ಮೇಲೆ ಅವಳು ನಿನ್ನ ತಲೆ ಮೇಲೆ ಕೂತ್ಕೊತಾಳೆ.

**ಪತಿ:** ಬೇಗಬೇಗ ಕಾಫಿ ಕುಡಿ.
**ಪತ್ನಿ:** ಬಿಸಿ ಇದೆ. ಸ್ವಲ್ಪ ತಣ್ಣಗಾಗಲಿ ಇರಿ, ಅರ್ಜೆಂಟ್ ಯಾಕೆ?
**ಪತಿ:** ಬೋರ್ಡು ನೋಡೇ ಕಾಫಿಗೆ ಇಪ್ಪತ್ತು ರೂಪಾಯಿ ಕೋಲ್ಡ್ ಕಾಫಿಗೆ ನೂರು ರೂಪಾಯಿ.

ಸಂಗ್ರಹ: ಶರದ ಕುಲಕರ್ಣಿ, ಬೀದರ್